ಸಂ.ಕಂಇ 20 ಮುಹಕಾ 2000 ದಿ: 9-5-2001ರಲ್ಲಿ ರೂ.50.00 ಲಕ್ಷಗಳಿಗೆ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗದವರಿಂದ ಕೈಗೊಳ್ಳಲಿದ್ದು ರೂ.50.00 ಲಕ್ಷಗಳನ್ನು ಕಾರ್ಯಪಾಲಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಇವರಿಗೆ ತೇವಣಿ ಮಾಡಲಾಗಿದೆ. ನಿಯಮಾನುಸಾರ ದುರಸ್ತಿ ಕಾರ್ಯವನ್ನು ಶೀಘ್ರದಲ್ಲಿಯೇ ಕೈಗೊಳ್ಳುವ ಪ್ರಕ್ರಿಯೆ ನಡೆದಿದೆ.

ಉಡುಪಿ ತಾಲ್ಲೂಕಿನಲ್ಲಿರುವ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಜಮೀನುಗಳ ವಿವರ.

3038(1821)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಕ್ಷೇತ್ರ ಶ್ರೀ ಅನಂತ ಪದ್ಮನಾಭ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನಿನ ವಿವರಗಳೇನು? ಲ್ಯಾಂಡ ಟ್ರಿಬ್ಯೂನಲ್ ಆ್ಯಕ್ಟ್‌ನ ಕೆಳಗೆ ದೇವಸ್ಥಾನದಿಂದ ಕೈಬಿಟ್ಟ ಜಮೀನಿನ ಪ್ರಮಾಣ ಎಷ್ಟು?

ಆ) ಈ ದೇವಸ್ಥಾನದ ಜಮೀನಿನ ಕುರಿತು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಎಷ್ಟು ಅರ್ಜಿಗಳು ಇತ್ಯರ್ಥವಾಗದೇ ಉಳಿದಿವೆ?

ಇ) ದೇವಸ್ಥಾನದ ವ್ಯಾಪ್ತಿಯ ಜಾಗದಲ್ಲಿ ಇತ್ತೀಚಿಗೆ ಅನಧಿಕೃತ ಕಟ್ಟಡಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದೇವಸ್ಥಾನದ ವ್ಯಾಪ್ತಿಗೆ ಬರುವ ಆಸ್ತಿಪಾಸ್ತಿಗಳ ಸಂರಕ್ಷಣೆ ಹಾಗೂ ಬಳಕೆಗೆ ಸೂಕ್ತ ಕ್ರಮ ನಿಯಮಗಳನ್ನು ಅನುಸರಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಬಾಬುರಾವ್ ಚಿಂಚನಸೂರ್ (ಮುಜರಾಯಿ ಸಚಿವರು):

ಅ) ಸದರಿ ದೇವಾಲಯದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಭೂ ಸುಧಾರಣಾ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಅಂದಾಜು 1100 ಎಕರೆ ಜಮೀನು ಇದ್ದು, ಈ ಜಮೀನಿನ ಪೈಕಿ ಭೂ ಸುಧಾರಣಾ ಕಾಯ್ದೆ ಪ್ರಕಾರ ಎಷ್ಟು ಜಮೀನು ಬಿಟ್ಟು ಹೋಗಿದೆ

ಎಂಬ ಬಗ್ಗೆ ಹಾಗೂ ಪ್ರಸ್ತುತ ದೇವಳದ ವಶದಲ್ಲಿರುವ ಜಮೀನುಗಳ ವಿವರಗಳ ಬಗ್ಗೆ ಹೆಚ್.ಆರ್. ಮತ್ತು ಸಿ.ಇ. ಕಾಯ್ದೆ 1951ಕ್ಕೆ ಸಂಬಂಧಿಸಿದ ರಿಜಿಸ್ಟರ್‌ನ್ನು ಪರಿಶೀಲಿಸಬೇಕಾಗಿದ್ದು, ಸಧ್ಯದಲ್ಲಿ ಸದರಿ ರಿಜಿಸ್ಟರ್‌ನ್ನು ಮುನ್ಸಿಫ್ ಕೋರ್ಟ್‌ಗೆ ಸಲ್ಲಿಸಿರುವುದರಿಂದ ಈ ಜಮೀನುಗಳ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.

ಅ) 1974ರ ಭೂ ಸುಧಾರಣಾ ಕಾಯ್ದೆ ಪ್ರಕಾರ ಸಲ್ಲಿಸಿದ ಡಿಕ್ಲರೇಷನ್ ಅರ್ಜಿಗಳು, ಇತ್ಯರ್ಥಕ್ಕೆ ಬಾಕಿ ಇರುವುದಿಲ್ಲ. ಹಿಂದಿನ ಭೂ ಸುಧಾರಣಾ ಕಾನೂನು ಪ್ರಕಾರ ಬಿಟ್ಟು ಹೋದ ಸ್ಥಳಗಳಿಗೆ ಪುನಃ ಅರ್ಜಿ ಸಲ್ಲಿಸುವ ಬಗ್ಗೆ ಅವಧಿ ವಿಸ್ತರಿಸಿದ ಪ್ರಕಾರ ಫಾರಂ ನಂ.7 ಎ ರಂತೆ ಸಲ್ಲಿಸಿದ 9 ಪ್ರಕರಣಗಳ ಬಗ್ಗೆ ಈಗ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಇತ್ಯರ್ಥವಾಗಬೇಕಿದೆ. ಅವುಗಳ ಬಗ್ಗೆ ದೇವಸ್ಥಾನದ ವತಿಯಿಂದ ಆಕ್ಷೇಪ ಸಲ್ಲಿಸಲಾಗಿದೆ.

ಇ) ಹೌದು. ಸದರಿ ಅನಧಿಕೃತ ಕಟ್ಟಡಗಳನ್ನು ತೆರವು ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಈ ದೇವಳದ ಸ್ಥಳದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆ ಬದಿಯಲ್ಲಿ ಖಾಸಗಿಯವರು ಅನಧಿಕೃತವಾಗಿ ಕಟ್ಟುತ್ತಿರುವ ಕಟ್ಟಡದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ದೇವಳದ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಲೋಕೋಪಯೋಗಿ ಇಲಾಖೆಗೆ ಹಾಗೂ ಗ್ರಾಮ ಪಂಚಾಯಿತಿಗೆ ನಿರ್ದೇಶನ ನೀಡಲಾಗಿದೆ.

ಈ) ಹೌದು. ದೇವಾಲಯಕ್ಕೆ ಸಂಬಂಧಪಟ್ಟ ಆಸ್ತಿ ಪಾಸ್ತಿಗಳ ಸಂರಕ್ಷಣೆ ಹಾಗೂ ಸದರಿ ಆಸ್ತಿಗಳ ಬಳಕೆಗೆ ದೇವಸ್ಥಾನದ ವತಿಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉಡುಪಿ ಜಿಲ್ಲೆಯ ದೇವಸ್ಥಾನಗಳಿಗೆ ನೀಡಲಾದ ಹಣ.

3039(1822)

ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿನ ಹಿಂದೂ ದೇವಾಲಯಗಳಿಗೆ ನೀಡಲಾಗಿರುವ ಒಟ್ಟು ಧನ ಸಹಾಯದ ಮೊಬಲಗು ಎಷ್ಟು? ಉಡುಪಿ ಜಿಲ್ಲೆಗೆ ನೀಡಲಾದ ಮೊತ್ತವೆಷ್ಟು?